## ‘ಕೀ ಝೆರಾಕ್ಸ್ ಕಳಿಸ್ತೀನಿ’

ತವರಿಗೆ ಹೋಗಿದ್ದ ಗುಂಡನ ಹೆಂಡತಿ ಹೇಳಿದ್ದಕ್ಕಿಂತ ನಾಲ್ಕು ದಿನ ಮುಂಚಿತವಾಗಿಯೇ ವಾಪಸ್ ಬಂದಿದ್ದಳು. ಆ ಸಮಯಕ್ಕೆ ಗುಂಡ ಮನೆಯ ಕೀಲಿ ಹಾಕಿಕೊಂಡು ತಾನು ನಡೆಸುತ್ತಿದ್ದ ಝೆರಾಕ್ಸ್ ಅಂಗಡಿಗೆ ಹೋಗಿದ್ದ. ಹೆಂಡತಿ ಫೋನ್ ಮಾಡಿ, ಕೂಡಲೇ ಮನೆಯ ಕೀಲಿ ಕೊಟ್ಟು ಕಳಿಸುವಂತೆ ಹೇಳಿದಳು. ಗುಂಡ, ‘ಅಲ್ಲಿವರೆಗೂ ಬರೋಕೆ ತಡವಾಗುತ್ತೆ. ಇರು, ಕೀಲಿ ಝೆರಾಕ್ಸ್ ಮಾಡಿ ವಾಟ್ಸ್‌ಆ್ಯಪ್ ಮಾಡ್ತೀನಿ’ ಎಂದ!

**ಸಿ. ವೇಣುಗೋಪಾಲ್**





ಚಿತ್ರಗಳು: ಗಣೇಶ ಆಚಾರ್ಯ

## ದಕ್ಷಿಣೆ ದಂಡ

ದೇವಸ್ಥಾನಕ್ಕೆ ಹೋಗಿದ್ದ ಕಂಜೂಸ್ ಗುಂಡ ಕಿಸೆಯನ್ನೆಲ್ಲಾ ತಡಕಾಡಿ ನಾಲ್ಕಾಣೆ ಹುಡುಕಿ ಪುರೋಹಿತರ ಆರತಿ ತಟ್ಟೆಗೆ ದಕ್ಷಿಣೆ ಹಾಕಿದ. ಸರತಿ ಸಾಲಿನಲ್ಲಿ ಅವನ ಹಿಂದೆ ನಿಂತಿದ್ದ ಯುವತಿಯೊಬ್ಬಳು ಕೈಚಾಚಿ ಗುಂಡನಿಗೆ ₹ 500ರ ನೋಟು ನೀಡಿದಳು. ಗುಂಡ ತಕ್ಷಣ ಅದನ್ನು ಆರತಿ ತಟ್ಟೆಗೆ ಹಾಕಿದ. ಇದನ್ನು ನೋಡಿದ ಪುರೋಹಿತರು ಖುಷಿಯಿಂದ ಲಾಡುಪ್ರಸಾದಗಳ ದೊಡ್ಡ ಪೊಟ್ಟಣವನ್ನು ಅವನಿಗೆ ನೀಡಿ ಬಾಯ್ತುಂಬ ಹರಸಿದರು. ಹೊರಗೆ ಬಂದ ಕೂಡಲೇ ಗುಂಡ ಆ ಯುವತಿಯ ಬಳಿ ಹೋಗಿ ‘ತಗೊಳ್ಳಿ, ಈ ಪ್ರಸಾದ ನಿಮಗೇ ಸೇರಬೇಕಾದುದು. ₹ 500 ದಕ್ಷಿಣೆ ಹಾಕಲು ಕೊಟ್ಟವರು ನೀವು’ ಎಂದ. ಆಗ ಆಕೆ, ‘ಆ ಹಣ ನನ್ನದಲ್ಲ, ನೀವು ಚಿಲ್ಲರೆ ಹುಡುಕುವಾಗ ನಿಮ್ಮ ಜೇಬಿನಿಂದ ಬಿದ್ದಿದ್ದು, ಅದನ್ನು ಎತ್ತಿ ನಿಮಗೆ ಕೊಟ್ಟೆ, ಅಷ್ಟೆ’ ಎಂದಳು.

**ಪಿ. ಜಯವಂತ ಪೈ**